ಕನ್ನಡ ನಾಡು–ನುಡಿ ಪದ್ಯದ ಸಾರಾಂಶ

ಕನ್ನಡ ನಾಡಿನ ಜನ ಹೆಚ್ಚು ಕಡಿಮೆಗಳಾಗದಂತೆ ಸಂದರ್ಭಕ್ಕೆ ತಕ್ಕ ಹಾಗೆ ಹದವರಿತು ಮಾತಾಡುವುದಕ್ಕೂ ಆಡಿದ್ದನ್ನು ಅರ್ಥ ಮಾಡಿಕೊಂಡು ವಿಚಾರಮಾಡುವುದಕ್ಕೂ ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶಪೂರ್ವಕವಾಗಿ ಓದಿ ಅಭ್ಯಾಸ ಮಾಡಿದ್ದರೂ ಕವಿಗಳು ಉಪಯೋಗಿಸಿದ ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಎಂದರೆ ಅವುಗಳನ್ನು ಕೇಳಿ ಅವುಗಳ ಸಾರವತ್ತಾದ ಭಾಗಗಳನ್ನು ಬಲ್ಲವರಾಗಿದ್ದರು . ವಿದ್ಯಾವಂತರಲ್ಲದಿದ್ದರೂ ಕಾವ್ಯ ರಚನೆ ಮಾಡಬಲ್ಲವರಾಗಿದ್ದರು ಎಂದು ಕವಿ ಶ್ರೀ ವಿಜಯ ಕನ್ನಡ ನಾಡಿನ ಜನರ ಕುರಿತು ವರ್ಣಿಸಿದ್ದಾನೆ .

ಸಂಸ್ಕೃತದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಹೇಳಲಿ ಅಥವಾ ಸಂಸ್ಕೃತದಲ್ಲಿಯೇ ಸಾಹಿತ್ಯ ರಚನೆ ಮಾಡಲಿ . ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವುದು ಬೇಡ . ತುಪ್ಪ ಮತ್ತು ತೈಲವನ್ನು ಸೇರಿಸಿದ ಅಸ್ವಾದು ಮಿಶ್ರಣ ಬೇಡ . ಕನ್ನಡದಲ್ಲಿ ಸಂಸ್ಕೃತವನ್ನು ಸೇರಿಸುವುದು ತುಪ್ಪ ಮತ್ತು ತೈಲಗಳ ಅಸ್ವಾದು ಮಿಶ್ರಣದಂತೆ ಎಂದು ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವ ಕುರಿತು ನಯಸೇನ ತನ್ನ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾನೆ.

ಕಪಿಸ೦ತತಿ ಸೇತುವೆ ಕಟ್ಟಿದರೋ ಕಟ್ಟಲಿಲ್ಲವೋ, ವಾಮನರೂಪ ಮುಗಿಲನ್ನು ಮುಟ್ಟಿದನೋ ಮುಟ್ಟಲಿಲ್ಲವೋ, ನರನು ಹರನ ಗ೦ಟಲನ್ನು ಮೆಟ್ಟಿದನೋ, ಮೆಟ್ಟಲಿಲ್ಲವೋ, ಆದರೆ ಈ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರು, ಮುಟ್ಟಿದರು, ಒತ್ತಿದರು ಮೆಟ್ಟಿದರು. ಏನೆಲ್ಲ ಮಾಡಿದರು. ಅದೇನು ಅವರ ಕೌಶಲ್ಯವೋ, ಹೆಗ್ಗಳಿಕೆಯೋ ಈ ಕವಿರಾಜರು ಎಂದು ನೇಮಿಚಂದ್ರನು ಕವೀಂದ್ರರ ಶ್ರೇಷ್ಠತೆಯನ್ನು ವರ್ಣಿಸಿದ್ದಾನೆ .

ಕನ್ನಡ ಭಾಷೆ ಎಷ್ಟು ಸುಲಭವಾಗಿದೆ ಎಂದರೆ ಅದು ಸುಲಿದ ಬಾಳೆಯ ಹಣ್ಣಿನಂತೆ, ಕಬ್ಬಿನ ಸಿಗುರು ಎಂದರೆ ಹೊರಪದರವನ್ನು ತೆಗೆದ ಕಬ್ಬು ಸವಿಯಲು ಸಿದ್ಧವಾದಂತೆ ಇದೆ. ಕುದಿಸಿ ಆರಿಸಿದ ಹಾಲು ಬಿಸಿಯಿಲ್ಲದೆ ಕುಡಿಯಲು ಯೋಗ್ಯವಾದಂತೆ ಇದೆ. ಸುಂದರವಾದ ಕನ್ನಡದ ನುಡಿಯಲ್ಲಿ ಬರೆಯಲ್ಪಟ್ಟಿರುವ ಈ ಅನುಭವಾಮೃತದಿಂದ ಯಾವ ಸಾಧಕನಾದರೂ ತನ್ನ ನಿಜಸ್ವರೂಪವನ್ನು ತಿಳಿದು ಆತ್ಮಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಪಡೆಯಬಹುದು. ಕೇವಲ ಸಂಸ್ಕೃತ ಗ್ರಂಥಗಳನ್ನು ಓದಿ ಸಾಧಿಸಬೇಕೆಂಬುದೇನೂ ನಿಯಮವಿಲ್ಲ ಎನ್ನುತ್ತಾನೆ ಕವಿ ಮಹಲಿಂಗರಂಗ. ಈ ಕವಿ ಇಲ್ಲಿ ಸಂಸ್ಕೃತವನ್ನು ತೆಗಳುತ್ತಿಲ್ಲ. ನಮ್ಮ ಶಾಸ್ತ್ರದಲ್ಲಿ ಒಂದು ನಿಯಮವಿದೆ. 'ನಿಂದಾ ತು ನ ನಿಂದ್ಯರ್ಥ೦ ಪರಂತು ಸ್ತುತ್ಯರ್ಥ೦'. ಗ್ರಂಥಗಳಲ್ಲಿ ಅಥವಾ ಮಾತುಗಳಲ್ಲಿ ವಿವರಿಸುವ ನಿಂದನೆ ಕೇವಲ ನಿಂದನೆಗಾಗಿಯಲ್ಲ, ಅದು ಪ್ರಸ್ತುತ ಗ್ರಂಥವನ್ನು ಸ್ತುತಿಸಲು.

ಮಲ್ಲಿಗೆ ,ಸಂಪಿಗೆ ,ದಾಳಿಂಬಿಗಳಷ್ಟೇ ಅಲ್ಲದೇ ತೆಂಗು ,ಅಡಕೆ ,ಮಾವು ಮೊದಲಾದ ಗಿಡಮರಗಳು ಕನ್ನಡ ನಾಡಿನಲ್ಲಿವೆ. ಇವಿಲ್ಲದೇ ಕನ್ನಡ ನಾಡಿನ ಗಿಡಮರಗಳಿಲ್ಲ ಎಂದು ಆಂಡಯ್ಯನು ಕನ್ನಡ ನಾಡಿನ ಪ್ರಕೃತಿ ರಮ್ಯತೆಯನ್ನು ಮೆಚ್ಚಿ ವರ್ಣಿಸಿದ್ದಾನೆ .

ಕೃತಿಕಾರರ ಪರಿಚಯ

ಶ್ರೀವಿಜಯ : ಶ್ರೀ ವಿಜಯನು ಸುಮಾರು ೯ ನೆಯ ಶತಮಾನದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದನು. ಇವನು ಕವಿರಾಜಮಾರ್ಗ ಎಂಬ ಲಾಕ್ಷಣಿಕ ಗ್ರಂಥವನ್ನು ರಚಿಸಿದ್ದಾನೆ.

ನಯಸೇನ : ನಯಸೇನನು ಕ್ರಿ.ಶ. ಸುಮಾರು ೧೨ ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯ ಮುಳಗುಂದದಲ್ಲಿ ಜೀವಿಸಿದ್ದನು. ಈತನು ಧರ್ಮಾಮೃತ ಎಂಬ ಚಂಪೂ ಕೃತಿಯನ್ನು ರಚಿಸಿದ್ದಾನೆ.

ನೇಮಿಚಂದ್ರ : ನೇಮಿಚಂದ್ರನು ಕ್ರಿ.ಶ. ಸುಮಾರು ೧೨ ನೆಯ ಶತಮಾನದಲ್ಲಿ ಜೀವಿಸಿದ್ದನು.ಇವನು ಲೀಲಾವತೀ ಪ್ರಬಂಧ ಮತ್ತು ಅರ್ಧನೇಮಿ ಪುರಾಣ ಎಂಬ ಪ್ರಸಿದ್ಧ ಕಾವ್ಯಗಳನ್ನು ರಚಿಸಿದ್ದಾನೆ .

ಮಹಲಿಂಗರಂಗ : ಇವನು ಕ್ರಿ.ಶ. ಸುಮಾರು ೧೭ ನೆಯ ಶತಮಾನದಲ್ಲಿ ಜೀವಿಸಿದ್ದನು. ಇವನು ಅನುಭವಾಮೃತ ಎಂಬ ಕೃತಿಯನ್ನು ರಚಿಸಿದ್ದಾನೆ. ಇವನ ನಿಜನಾಮ ಶ್ರೀರಂಗ. ಇವನ ಆರಾಧ್ಯ ದೈವ ಶ್ರೀಶೈಲ ಮಲ್ಲಿಕಾರ್ಜುನ .

ಆಂಡಯ್ಯ : ಆಂಡಯ್ಯನು ಕ್ರಿ.ಶ.ಸುಮಾರು ೧೩ ನೇ ಶತಮಾನದಲ್ಲಿ ಕದಂಬರ ದೊರೆ ಕಾಮದೇವನ ಆಶ್ರಯದಲ್ಲಿದ್ದನು. ಇವನು ಕಬ್ಬಿಗರ ಕಾವ ಎಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ.

ಕನ್ನಡ ನಾಡು–ನುಡಿ ಪದ್ಯದಲ್ಲಿ ಇರುವ ಎಲ್ಲ ನುಡಿಗಳನ್ನೂ ಬಿ.ಎಂ.ಶ್ರೀ ಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಪದನರಿದು ನುಡಿಯುವವರು ಯಾರು ಎಂದು ಕವಿ ಹೇಳಿದ್ದಾರೆ.

ಉ: ಪದನರಿದು ನುಡಿಯುವವರು ಕನ್ನಡ ನಾಡಿನ ಜನರು ಎಂದು ಕವಿ ಹೇಳಿದ್ದಾರೆ.

೨. ತುಪ್ಪದೊಡನೆ ಯಾವುದನ್ನು ಬೆರೆಸಬಾರದು ?

ಉ: ತುಪ್ಪದೊಡನೆ ತೈಲವನ್ನು ಬೆರೆಸಬಾರದು .

೩. ಮಹಲಿಂಗರಂಗನ ಪ್ರಕಾರ ಸುಲಿದ ಬಾಳೆಯ ಹಣ್ಣಿನಂತೆ ಇರುವ ಭಾಷೆ ಯಾವುದು ?

ಉ: ಮಹಲಿಂಗರಂಗನ ಪ್ರಕಾರ ಸುಲಿದ ಬಾಳೆಯ ಹಣ್ಣಿನಂತೆ ಇರುವ ಭಾಷೆ ಕನ್ನಡ .

ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕನ್ನಡಿಗರ ವಿಶೇಷತೆಯನ್ನು ಶ್ರೀ ವಿಜಯ ಹೇಗೆ ಸಾರಿದ್ದಾನೆ ?

ಕನ್ನಡ ನಾಡಿನ ಜನ ಹೆಚ್ಚು ಕಡಿಮೆಗಳಾಗದಂತೆ ಸಂದರ್ಭಕ್ಕೆ ತಕ್ಕ ಹಾಗೆ ಹದವರಿತು ಮಾತಾಡುವುದಕ್ಕೂ ಆಡಿದ್ದನ್ನು ಅರ್ಥ ಮಾಡಿಕೊಂಡು ವಿಚಾರಮಾಡುವುದಕ್ಕೂ ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶಪೂರ್ವಕವಾಗಿ ಓದಿ ಅಭ್ಯಾಸ ಮಾಡದಿದ್ದರೂ ಕವಿಗಳು ಉಪಯೋಗಿಸಿದ ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಎಂದರೆ ಅವುಗಳನ್ನು ಕೇಳಿ ಅವುಗಳ ಸಾರವತ್ತಾದ ಭಾಗಗಳನ್ನು ಬಲ್ಲವರಾಗಿದ್ದರು . ವಿದ್ಯಾವಂತರಲ್ಲದಿದ್ದರೂ ಕಾವ್ಯ ರಚನೆ ಮಾಡಬಲ್ಲವರಾಗಿದ್ದರು ಎಂದು ಶ್ರೀ ವಿಜಯ ಕನ್ನಡಿಗರ ವಿಶೇಷತೆಯನ್ನು ಸಾರಿದ್ದಾನೆ.

೨. ಕನ್ನಡ ಮತ್ತು ಸಂಸ್ಕೃತ ಭಾಷಾ ಬಳಕೆಯ ಬಗ್ಗೆ ನಯಸೇನ ಏನು ಹೇಳುತ್ತಾನೆ ?

ಸಂಸ್ಕೃತದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಹೇಳಲಿ ಅಥವಾ ಸಂಸ್ಕೃತದಲ್ಲಿಯೇ ಸಾಹಿತ್ಯ ರಚನೆ ಮಾಡಲಿ . ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವುದು ಬೇಡ . ತುಪ್ಪ ಮತ್ತು ತೈಲವನ್ನು ಸೇರಿಸಿದ ಅಸಾಧ್ಯ ಮಿಶ್ರಣ ಬೇಡ . ಕನ್ನಡದಲ್ಲಿ ಸಂಸ್ಕೃತವನ್ನು ಸೇರಿಸುವುದು ತುಪ್ಪ ಮತ್ತು ತೈಲಗಳ ಅಸಾಧ್ಯ ಮಿಶ್ರಣದಂತೆ ಎಂದು ನಯಸೇನ ಹೇಳಿದ್ದಾನೆ .

೩. ಕವೀಂದ್ರರ ಶ್ರೇಷ್ಠತೆಯನ್ನು ನೇಮಿಚಂದ್ರನು ಹೇಗೆ ವರ್ಣಿಸಿದ್ದಾನೆ ?

ಕಪಿಸ೦ತತಿ ಸೇತುವೆ ಕಟ್ಟಿದರೋ ಕಟ್ಟಲಿಲ್ಲವೋ, ವಾಮನರೂಪ ಮುಗಿಲನ್ನು ಮುಟ್ಟಿದನೋ ಮುಟ್ಟಲಿಲ್ಲವೋ, ನರನು ಹರನ ಗ೦ಟಲನ್ನು ಮೆಟ್ಟಿದನೋ, ಮೆಟ್ಟಲಿಲ್ಲವೋ, ಆದರೆ ಈ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರು, ಮುಟ್ಟಿದರು, ಒತ್ತಿದರು ಮೆಟ್ಟಿದರು. ಏನೆಲ್ಲ ಮಾಡಿದರು. ಅದೇನು ಅವರ ಕೌಶಲ್ಯವೋ, ಹೆಗ್ಗಳಿಕೆಯೋ ಈ ಕವಿರಾಜರು ಎಂದು ನೇಮಿಚಂದ್ರನು ಕವೀಂದ್ರರ ಶ್ರೇಷ್ಠತೆಯನ್ನು ವರ್ಣಿಸಿದ್ದಾನೆ .

೪. ಕನ್ನಡ ನುಡಿಯಲ್ಲೇ ಮೋಕ್ಷಸಾಧನೆ ಎಂದು ಕವಿ ಮಹಲಿಂಗರಂಗ ಹೇಗೆ ಸಾಧಿಸುತ್ತಾರೆ ?

ಕನ್ನಡ ಭಾಷೆ ಎಷ್ಟು ಸುಲಭವಾಗಿದೆ ಎಂದರೆ ಅದು ಸುಲಿದ ಬಾಳೆಯ ಹಣ್ಣಿನಂತೆ, ಕಬ್ಬಿನ ಸಿಗುರು ಎಂದರೆ ಹೊರಪದರವನ್ನು ತೆಗೆದ ಕಬ್ಬು ಸವಿಯಲು ಸಿದ್ಧವಾದಂತೆ ಇದೆ. ಕುದಿಸಿ ಆರಿಸಿದ ಹಾಲು ಬಿಸಿಯಿಲ್ಲದೆ ಕುಡಿಯಲು ಯೋಗ್ಯವಾದಂತೆ ಇದೆ.

ಸುಂದರವಾದ ಕನ್ನಡದ ನುಡಿಯಲ್ಲಿ ಬರೆಯಲ್ಪಟ್ಟಿರುವ ಈ ಅನುಭವಾಮೃತದಿಂದ ಯಾವ ಸಾಧಕನಾದರೂ ತನ್ನ ನಿಜಸ್ವರೂಪವನ್ನು ತಿಳಿದು ಆತ್ಮಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಪಡೆಯಬಹುದು. ಕೇವಲ ಸಂಸ್ಕೃತ ಗ್ರಂಥಗಳನ್ನು ಓದಿ ಸಾಧಿಸಬೇಕೆಂಬುದೇನೂ ನಿಯಮವಿಲ್ಲ ಎನ್ನುತ್ತಾನೆ ಕವಿ ಮಹಲಿಂಗರಂಗ.

೫. ಕನ್ನಡ ನಾಡಿನ ಪ್ರಾಕೃತಿಕ ವರ್ಣನೆಯನ್ನು ಆಂಡಯ್ಯ ಕವಿ ಹೇಗೆ ಸಾರಿದ್ದಾರೆ ?

ಮಲ್ಲಿಗೆ ,ಸಂಪಿಗೆ ,ದಾಳಿಂಬೆಗಳಷ್ಟೇ ಅಲ್ಲದೇ ತೆಂಗು ,ಅಡಕೆ ,ಮಾವು ಮೊದಲಾದ ಗಿಡಮರಗಳು ಕನ್ನಡ ನಾಡಿನಲ್ಲಿವೆ. ಇವಿಲ್ಲದೇ ಕನ್ನಡ ನಾಡಿನ ಗಿಡಮರಗಳಿಲ್ಲ ಎಂದು ಆಂಡಯ್ಯನು ಕನ್ನಡ ನಾಡಿನ ಪ್ರಕೃತಿ ರಮ್ಯತೆಯನ್ನು ಮೆಚ್ಚಿ ವರ್ಣಿಸಿದ್ದಾನೆ .

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ .

೧. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ ನಾಡು –ನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕನ್ನಡ ನಾಡಿನ ಜನರ ಕುರಿತು ಹೇಳುವ ಸಂದರ್ಭದಲ್ಲಿ ಕವಿ ಶ್ರೀ ವಿಜಯ ಹೇಳಿದ್ದಾನೆ .

ಸಂದರ್ಭ : ಕನ್ನಡ ನಾಡಿನ ಜನ ಹೆಚ್ಚು ಕಡಿಮೆಗಳಾಗದಂತೆ ಸಂದರ್ಭಕ್ಕೆ ತಕ್ಕ ಹಾಗೆ ಹದವರಿತು ಮಾತಾಡುವುದಕ್ಕೂ ಆಡಿದ್ದನ್ನು ಅರ್ಥ ಮಾಡಿಕೊಂಡು ವಿಚಾರಮಾಡುವುದಕ್ಕೂ ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶಪೂರ್ವಕವಾಗಿ ಓದಿ ಅಭ್ಯಾಸ ಮಾಡದಿದ್ದರೂ ಕವಿಗಳು ಉಪಯೋಗಿಸಿದ ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು ಎಂದು ಕವಿ ಶ್ರೀವಿಜಯ ಹೇಳಿದ್ದಾನೆ.

ಸ್ವಾರಸ್ಯ : ನಮ್ಮ ಕನ್ನಡದ ಜನಪದರು ಅಕ್ಷರಸ್ಥರಲ್ಲದಿದ್ದರೂ ಕಾವ್ಯ ಪ್ರಯೋಗ ಪರಿಣತರಾಗಿದ್ದರು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೨. ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ ನಾಡು–ನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ನಯಸೇನ ಹೇಳಿದ್ದಾನೆ .

ಸಂದರ್ಭ : ಸಂಸ್ಕೃತದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಹೇಳಲಿ ಅಥವಾ ಸಂಸ್ಕೃತದಲ್ಲಿಯೇ ಸಾಹಿತ್ಯ ರಚನೆ ಮಾಡಲಿ . ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವುದು ಬೇಡ . ತುಪ್ಪ ಮತ್ತು ತೈಲವನ್ನು ಸೇರಿಸಿದ ಅಸ್ವಾದು ಮಿಶ್ರಣ ಬೇಡ ಎಂದು ನಯಸೇನ ಹೇಳಿದ್ದಾನೆ .
ಸ್ವಾರಸ್ಯ : ನಮ್ಮ ಕನ್ನಡವು ಕೆಲವು ಪಂಡಿತರಿಂದ ಸಂಸ್ಕೃತಮಯವಾಗುವುದನ್ನು ಸಹಿಸದೇ ಶುದ್ಧ ಕನ್ನಡವೇ ಇರಬೇಕೆಂಬ ಕವಿಯ ಕಾಳಜಿ ಇಲ್ಲಿ ವ್ಯಕ್ತವಾಗಿದೆ.

೩. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ ನಾಡು–ನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ನೇಮಿಚಂದ್ರ ಹೇಳಿದ್ದಾನೆ .

ಸಂದರ್ಭ : ಕಪಿಸಂತತಿ ಸೇತುವೆ ಕಟ್ಟಿದರೋ ಕಟ್ಟಲಿಲ್ಲವೋ, ವಾಮನರೂಪ ಮುಗಿಲನ್ನು ಮುಟ್ಟಿದನೋ ಮುಟ್ಟಲಿಲ್ಲವೋ, ನರನು ಹರನ ಗಂಟಲನ್ನು ಮೆಟ್ಟಿದನೋ, ಮೆಟ್ಟಲಿಲ್ಲವೋ, ಆದರೆ ಈ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರು, ಮುಟ್ಟಿದರು, ಒತ್ತಿದರು ಮೆಟ್ಟಿದರು. ಏನೆಲ್ಲ ಮಾಡಿದರು ಎಂದು ಕವಿ ಹೇಳಿದ್ದಾನೆ.

ಸ್ವಾರಸ್ಯ : ಕನ್ನಡ ಕವಿಗಳ ಶ್ರೇಷ್ಠ ಕಾವ್ಯ ರಚನೆಯ ಕುರಿತು ಹೇಳುವಾಗ ಕವಿ ಮೇಲಿನಂತೆ ವರ್ಣಿಸಿದ್ದಾರೆ.

೪. ಕಳಿದ ಸಿಗುರಿನ ಕಬ್ಬಿನಂದದಿ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ ನಾಡು–ನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಮಹಲಿಂಗರಂಗ ಹೇಳಿದ್ದಾನೆ .

ಸಂದರ್ಭ : ಕನ್ನಡ ಭಾಷೆ ಎಷ್ಟು ಸುಲಭವಾಗಿದೆ ಎಂದರೆ ಅದು ಸುಲಿದ ಬಾಳೆಯ ಹಣ್ಣಿನಂತೆ, ಕಬ್ಬಿನ ಸಿಗುರು ಎಂದರೆ ಹೊರಪದರವನ್ನು ತೆಗೆದ ಕಬ್ಬು ಸವಿಯಲು ಸಿದ್ಧವಾದಂತೆ ಇದೆ. ಕುದಿಸಿ ಆರಿಸಿದ ಹಾಲು ಬಿಸಿಯಿಲ್ಲದೆ ಕುಡಿಯಲು ಯೋಗ್ಯವಾದಂತೆ ಇದೆ. ಸುಂದರವಾದ ಕನ್ನಡದ ನುಡಿಯಲ್ಲಿ ಬರೆಯಲ್ಪಟ್ಟಿರುವ ಈ ಅನುಭವಾಮೃತದಿಂದ ಯಾವ ಸಾಧಕನಾದರೂ ತನ್ನ ನಿಜಸ್ವರೂಪವನ್ನು ತಿಳಿದು ಆತ್ಮಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಪಡೆಯಬಹುದು ಎಂದು ಕವಿ ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ನಮ್ಮ ಕನ್ನಡವು ಸರಳ ಸುಂದರ ,ಸಂಸ್ಕೃತಕ್ಕಿಂತ ಯಾವುದರಲ್ಲಿಯೂ ಕಡಿಮೆಯಿಲ್ಲ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೫. ದಾಳಿಂಬಮಲ್ಲದೊಪ್ಪುವ ಚೆಂದೆಂ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ ನಾಡು–ನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಆಂಡಯ್ಯ ಕವಿ ಹೇಳಿದ್ದಾನೆ.

ಸಂದರ್ಭ :ಮಲ್ಲಿಗೆ ,ಸಂಪಿಗೆ ,ದಾಳಿಂಬೆಗಳಷ್ಟೇ ಅಲ್ಲದೇ ತೆಂಗು ,ಅಡಕೆ ,ಮಾವು ಮೊದಲಾದ ಗಿಡಮರಗಳು ಕನ್ನಡ ನಾಡಿನಲ್ಲಿವೆ. ಇವಿಲ್ಲದೇ ಕನ್ನಡ ನಾಡಿನ ಗಿಡಮರಗಳಿಲ್ಲ ಎಂದು ಆಂಡಯ್ಯನು ಕನ್ನಡ ನಾಡಿನ ಪ್ರಕೃತಿ ರಮ್ಯತೆಯನ್ನು ಮೆಚ್ಚಿ ವರ್ಣಿಸುವಾಗ ಮೇಲಿನಂತೆ ಹೇಳಿದ್ದಾನೆ.

ಸ್ವಾರಸ್ಯ : ಕನ್ನಡ ನಾಡಿನ ಪ್ರಾಕೃತಿಕ ಸೌಂದರ್ಯ ಇಲ್ಲಿ ವ್ಯಕ್ತವಾಗಿದೆ.

ಭಾಷಾ ಚಟುವಟಿಕೆ

ಖ್ಯಾತ ಕರ್ಣಾಟಕ ವೃತ್ತಗಳು ಯಾವುವು ?

ಉ: ಉತ್ಪಲಮಾಲಾವೃತ್ತ ,ಚಂಪಕಮಾಲಾವೃತ್ತ ,ಸ್ರಗ್ಧರಾ ವೃತ್ತ ,ಮಹಾಸ್ರಗ್ಧರಾ ವೃತ್ತ , ಶಾರ್ದೂಲವಿಕ್ರೀಡಿತ ವೃತ್ತ ,ಮತ್ತೇಭವಿಕ್ರೀಡಿತ ವೃತ್ತ ಇವು ಆರು ಖ್ಯಾತ ಕರ್ಣಾಟಕ ವೃತ್ತಗಳಾಗಿವೆ.

ಅಕ್ಷರಗಣಗಳಲ್ಲಿ ಎಷ್ಟು ವಿಧ ? ಅವುಗಳು ಯಾವುವು ?

ಅಕ್ಷರಗಣಗಳು ಎಂಟು

ಅವುಗಳನ್ನು ಸೂತ್ರದ ಸಹಾಯದಿಂದ ಹೀಗೆ ಹೇಳಬಹುದು .

ಯಮಾತಾರಾಜಭಾನಸಲಗಂ

ಯಮಾತಾ = **U**– – ಯಗಣ

ಮಾತಾರಾ = – – – ಮಗಣ

ತಾರಾಜ = – –**U** ತಗಣ

ರಾಜಭಾ= –**U**– ರಗಣ

ಜಭಾನ = **U**–**U** ಜಗಣ

ಭಾನಸ = −UU ಭಗಣ

ನಸಲ = UUU ನಗಣ

ಸಲಗಂ = UU− ಸಗಣ

ಕೆಳಗಿನ ಪದ್ಯಭಾಗಕ್ಕೆಪ್ರಸ್ತಾರ ಹಾಕಿ,ಗಣ ವಿಭಾಗಿಸಿ ಛಂದಸ್ಸಿನ ಹೆಸರು ಬರೆಯಿರಿ.

−UU| − − | UU UU

ಸಕ್ಕದ | ಮಂ ಪೇ|ಳ್ವೊಡೆ ನೆರೆ

−UU|— − | U −U | −UU|− −

ಸಕ್ಕದ |ಮಂ ಪೇ|ಳ್ಗಿ ಶುದ್ಧ| ಕನ್ನಡ|ದೊಳ್ ತಂ

ಕಂದ ಪದ್ಯ

ಭ ರ ನ ಭ ಭ ರ ಲ+ಗು

−UU| −U−|UUU |− UU| −UU |−U − |U−

ಕಟ್ಟುಗೆ| ಕಟ್ಟದಿ|ರ್ಕೆ ಕಡ|ಲಂ ಕಪ| ಸಂತತಿ| ವಾಮನ|ಕ್ರಮಂ

ಉತ್ಪಲ ಮಾಲಾವೃತ್ತ

UUU|− U U |− U| −UU

ಸುಲಿದ| ಬಾಳೆಯ| ಹಣ್ಣಿ ನಂದದಿ

UUU|UUUU|−U | −UU

ಕಳಿದ| ಸಿಗುರಿನ| ಕಬ್ಬಿ ನಂದದಿ

UUU |−UU |− U |−UU |UUU |— − |−

ಅಳಿದ |ಉಷ್ಣದ |ಹಾಲಿ|ನಂದದಿ| ಸುಲಭ|ವಾಗಿ| ರ್ಪ

ಭಾಮಿನಿ ಷಟ್ಪದಿ